ಒಖಿ ಸಂತ್ರಸ್ತರಿಗೆ ತುರ್ತು ನೆರವಿನ ಭರವಸೆ ನೀಡಿದ ಪ್ರಧಾನಿ ಮೋದಿ 9
ಆಸ್ತಿ ನೋಂದಣಿಗೆ ಆಧಾರ್ ಕಡ್ಡಾಯ ಮಾಡಿಲ್ಲ: ಕೇಂದ್ರ ಸ್ಪಷ್ಟನೆ 10
5 ಲಕ್ಷ ಮಂದಿ ಬಿಟ್ ಕಾಯಿನ್ ಸಿರಿವಂತರಿಗೆ ನೋಟಿಸ್ 10
ರಾಜ್ಯಗಳು ಒಪ್ಪಿದರೆ ಜಿಎಸ್‌ಟಿ ವ್ಯಾಪ್ತಿಗೆ ತೈಲೋತ್ಪನ್ನಗಳು: ಜೇಟ್ಲಿ 10

ಮಂಗಳೂರು
ಬುಧವಾರ
20 ಡಿಸೆಂಬರ್ 2017
ಹೇಮಲಂಬಿ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ : ಪೂರ್ವಾಷಾಢ
ಬೆಲೆ ₹ 5.00

# ಹೊಸ ದಿಗಂತ HD

ಸಂಪುಟ 39, ಸಂಚಿಕೆ 263, ಪುಟಗಳು 12+4+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2015-17 Posted at kodialbail P.

CENTRAL LIBRARY

ಜ.6ರಿಂದ ಸಹ್ಯಾದ್ರಿ ಕಾನ್‌ಕ್ಲೇವ್ ನೋಬೆಲ್ ಪುರಸ್ಕೃತರು, ಅಂತಾರಾಷ್ಟ್ರೀಯ ವಿಜ್ಞಾನಿಗಳು ಭಾಗಿ

## ವಿಜ್ಞಾನ ಕ್ಷೇತ್ರ ಸಾಧಕರ ಜತೆ ಕ್ಯಾಂಪಸ್‌ನಲ್ಲಿ ಸಂವಾದ

ದಿಗಂತ ವರದಿ: ಮಂಗಳೂರು, ಡಿ.19

ಅಡ್ಯಾರ್‌ನ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ವತಿಯಿಂದ ನೋಬೆಲ್ ಪುರಸ್ಕೃತರು ಹಾಗೂ ಉದ್ಯಮಿಗಳು, ಅಂತಾರಾಷ್ಟ್ರೀಯ ವಿಜ್ಞಾನಿಗಳ ಜತೆ ಸಂವಾದಕ್ಕೆ ಅವಕಾಶ ಮಾಡಿಕೊಡುವ ಸಹ್ಯಾದ್ರಿ ಕಾನ್‌ಕ್ಲೇವ್ ಕಾರ್ಯಕ್ರಮ ಜ. 6ರಿಂದ 10ರವರೆಗೆ ಅಡ್ಯಾರ್ ಸಹ್ಯಾದ್ರಿ ಕಾಲೇಜು ಕ್ಯಾಂಪಸ್‌ನಲ್ಲಿ ಜರಗಲಿದೆ.

ವಿಜ್ಞಾನ, ತಂತ್ರಜ್ಞಾನ, ಮ್ಯಾನೇಜ್‌ಮೆಂಟ್ ವಿಷಯಕ್ಕೆ ಸಂಬಂಧಿಸಿ 'ಸಹ್ಯಾದ್ರಿ ಸಮಾವೇಶ್' ಆಯೋಜಿಸಲಾಗಿದೆ. ನೋಬೆಲ್ ಪುರಸ್ಕೃತರಾದ ಅಡಾ ಇ.ಯೊನತ್, ಸರ್ಜ್ ಹೆರ್ರೋಚ್, ಟರ್ನಿಂಗ್ ಅವಾರ್ಡ್ ಇನ್ ಕಂಪ್ಯೂಟರ್ ಸೈನ್ಸ್ ಪುರಸ್ಕೃತ ಜೋಸೆಫ್ ಸಿಫಾಕಿಸ್, ಅಂತಾರಾಷ್ಟ್ರೀಯ ವಿಜ್ಞಾನಿಗಳಾದ ರಾಬರ್ಟ್ ಸಿ.ರಿಚರ್ಡ್‌ಸನ್, ಸತೀಶ್ ಕೆ.ತ್ರಿಪಾತು, ಪ್ರೊ. ಎಸ್. ಎಸ್. ಅಯ್ಯಂಗಾರ್, ಅನಿಶ್ ಅರೋರಾ, ಪ್ರೊ. ಸತ್ಯಪ್ರಕಾಶ್, ಪದ್ಮಶ್ರೀ ಅನಂತ ಅಗರ್‌ವಾಲ್, ಅನುರಾಧ ಅಗರ್‌ವಾಲ್ ಭಾಗವಹಿಸಲಿದ್ದಾರೆ ಎಂದು ಸಂಸ್ಥೆ ಅಧ್ಯಕ್ಷ ಡಾ. ಮಂಜುನಾಥ ಭಂಡಾರಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.




ಭಾರತೀಯ ಪ್ರಮುಖರಾದ ರಾಜ್ಯಸಭಾ ಸದಸ್ಯ ರಾಜೀವ್ ಗೌಡ, ಡಿ.ಪಿ.ಅಗರ್ವಾಲ್, ಡಾ. ಸುಧೀರ್ ಕೆ.ಮಿಶ್ರಾ, ಎಡಿಜಿಪಿ ಅಮರ್ ಕುಮಾರ್ ಪಾಂಡೆ, ಸಂಜಯ್ ಸಹಾಯ್, ಎಂ.ಎನ್.ವಿದ್ಯಾಶಂಕರ್, ಮನೋಜ್ ರಂಜನ್, ಶಶಿಕಿರಣ್ ಶೆಟ್ಟಿ ಹಸನಬ್ಬ ಅನಂತ್ ರವಿ, ಡಾ. ಬಿ.ಕೆ.ರವೀಂದ್ರ, ಪ್ರಶಾಂತ್ ಪ್ರಕಾಶ್, ಅನಿತಾ ಪೈ, ಭರತ್ ಶಿವಪ್ಪ ಡಾ. ಬಿ.ಕೆ.ರವೀಂದ್ರ, ಚೇತನ್ ಶೆಣೈ, ಕಮಲೇಶ್ ಮನುಜ, ಸಂದೀಪ್ ಎಸ್.ಪಿ, ರಾಹುಲ್ ಕಿಣಿ ಪಾಲ್ಗೊಳ್ಳಲಿದ್ದಾರೆ ಎಂದರು.

ವಿದ್ಯಾರ್ಥಿಗಳು ಎಳವೆಯಲ್ಲೇ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಕೊಳ್ಳಬೇಕು ಎಂದು ಸಹ್ಯಾದ್ರಿ ಕಾಲೇಜು ಇದೇ ಮೊದಲ ಬಾರಿಗೆ ಇಂತಹ ಬೃಹತ್ ಸಮಾವೇಶ ಆಯೋಜಿಸಿದೆ. ಪ್ರೌಢಶಾಲಾ ಹಾಗೂ ಪ.ಪೂ. ವಿದ್ಯಾರ್ಥಿಗಳು, ವಿಜ್ಞಾನ, ತಂತ್ರಜ್ಞಾನ ಹಾಗೂ ವ್ಯವಹಾರ ಆಡಳಿತ ಕ್ಷೇತ್ರಕ್ಕೆ ಸಂಬಂಧಪಟ್ಟ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ನೋಬೆಲ್ ಪುರಸ್ಕೃತರು, ಅಂತಾರಾಷ್ಟ್ರೀಯ ವಿಜ್ಞಾನಿಗಳು ಹಾಗೂ ಕೈಗಾರಿಕೋದ್ಯಮಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ನೀರು, ಇಂಧನ, ಪರಿಸರ, ಆರೋಗ್ಯ ವಿಷಯದ ಬಗ್ಗೆ ಚರ್ಚೆ, ಸಂವಾದ ನಡೆಯಲಿದೆ ಎಂದು ವಿವರಿಸಿದರು.

ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಕರ್ನಾಟಕ ಜೈವಿಕ ಮತ್ತು ಮಾಹಿತಿ ತಂತ್ರಜ್ಞಾನ ಸೇವೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಸೊಸೈಟಿ, ಬೆಳಗಾವಿ ವಿಶ್ವೇಶರಯ್ಯ ತಾಂತ್ರಿಕ ವಿವಿ, ಮಂಗಳೂರು ವಿವಿ ಹಾಗೂ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಹಯೋಗದೊಂದಿಗೆ ಸಮಾವೇಶ ನಡೆಯಲಿದೆ ಎಂದರು.

ಸಮಾವೇಶದ ಬ್ರೋಶರ್‌ನ್ನು ಈ ಸಂದರ್ಭ ಡಾ. ಮಂಜುನಾಥ್ ಭಂಡಾರಿ ಬಿಡುಗಡೆಗೊಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ಯು.ಎಂ.ಭೂಶಿ, ಕಾರ್ಯಕ್ರಮ ಸಂಯೋಜಕ ಡಾ. ಸಿ.ಕೆ. ಮಂಜುನಾಥ್ ಉಪಸ್ಥಿತರಿದ್ದರು.

### ಜ.6ರಂದು ಉದ್ಘಾಟನೆ

**ಸಮಾವೇಶವು ಜ. 6ರಂದು ಸಂಜೆ 4ಕ್ಕೆ ಉದ್ಘಾಟನೆಗೊಳ್ಳಲಿದೆ. ತಿರುಪತಿ ಕ್ಷೇತ್ರದ ಮುಖ್ಯ ಪುರೋಹಿತ ಡಾ. ರಮಣ ದೀಕ್ಷಿತುಲು, ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಮ್ ಭಾಗವಹಿಸಲಿದ್ದಾರೆ. ಕೇಂದ್ರ ಸಚಿವ ಡಾ. ಹರ್ಷವರ್ಧನ ಅವರು ಭಾಗವಹಿಸುವ ಕುರಿತು ಮಾತುಕತೆ ನಡೆಯುತ್ತಿದೆ. ಜ. 10 ರಂದು ಮಧ್ಯಾಹ್ನ 1ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು. ಸಮಾವೇಶದಲ್ಲಿ ಸಂವಾದದ ಜತೆಗೆ ವಿಜ್ಞಾನ ಮಾದರಿ ತಾಂತ್ರಿಕ, ಗಣಿತ ವಸ್ತು ಪ್ರದರ್ಶನ, ಏರ್ ಶೋ, ಡ್ರೋಣ್‌ಗಳ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.**

THE NEW
# INDIAN EXPRESS
MANGALURU • WEDNESDAY • DECEMBER 20, 2017 • ₹5.00 • PAGES 16 • CITY EDITION

CENTRAL LIBRARY





## INDIA PART OF QUAD CO-OP, SAYS U.S. SECURITY POLICY

**The new National Security Strategy says the US will seek to increase quadrilateral cooperation with Japan, Australia and India**

TO HELP **MAINTAIN SOVEREIGNTY**

With an eye on China's One Belt One Road and the China-Pakistan Economic Corridor, the US said it would help South Asian countries "maintain their sovereignty as China increases its influence in the region". It also said it will support India's leadership in maintaining security in the Indo-Pacific region

**TELLS PAK TO ACT AGAINST TERROR**

- US President Donald Trump asked Pakistan to take "decisive action" against terror groups operating on its soil
- "We make massive payments every year to Pakistan... No partnership can survive a country's support to militants and terrorists who target a partner's own service members"

CHENNAI • MADURAI • VIJAYAWADA • BENGALURU • KOCHI • HYDERABAD • VISAKHAPATNAM • COIMBATORE • KOZHIKODE • THIRUVANANTHAPURAM • BELAGAVI • BHUBANESWAR • SHIVAMOGGA • MANGALURU • TIRUPATI • TIRUCHY • TIRUNELVELI • SAMBALPUR • HUBBALLI • DHARMAPURI • KOTTAYAM • KANNUR • VILLUPURAM • KOLLAM • WARANGAL • TAD

# FIVE-DAY SAHYADRI CONCLAVE TO BEGIN FROM JAN. 6



Manjunath Bhandary (third from left) releases brochures of Sahyadri Conclave in Mangaluru on Tuesday

**ENS @ Mangaluru**

A five-day Sahyadri Conclave on Science, Technology and Management will begin at Sahyadri College of Engineering and Management at Adyar here on January 6.

Higher education minister Basavaraj Rayareddy will inaugurate the event at 4 pm on January 6. Science and Technology minister MR Seetharam and Tirumala Temple chief minister Dr Ramana Deekshithulu will be present.

Internationally renowned scientists like Ada E Yonath and Serge Haroche (both Nobel laureates), Turing awardee Joseph Sifakis, Robert C Richardson, scientific researcher and robotics, Leeds University, UK, Satish Tripathi, president, University of Buffalo, USA, SS Iyengar, Professor, Florida University, Anish Arora, Professor, Ohio University, USA, Satya Prakash, Professor, Mcgill University, Canada, Anant Agarwal, CEO of MIT, USA and Anuradha Agarwal, Principal research scientist, MIT, USA will take part in interactive sessions and panel discussions on technical advancements related to water, energy, environment and health.

A release from the college said the conclave will give an opportunity to the young generation to meet and interact with Nobel laureates, internationally renowned scientists and industrialist.s

ಬುಧವಾರ, ಡಿಸೆಂಬರ್ 20, 2017 | ಮಂಗಳೂರು | ₹ 5.00 | ಸಂಪುಟ 19 | ಸಂಚಿಕೆ 350 | ಪುಟ 20 + 4 + 2 • www.prajavani.net f/prajavani.net

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Sahyadri College of Engineering & Management * Adyar, Mangalore-7
CENTRAL LIBRARY

ಕ್ಷೇಮ ಕುಶಲ
'ಹಾಸ್ಯಪ್ರಜ್ಞೆಯೇ ಮದ್ದು'

ಗುಜರಾತ್–ಹಿಮಾಚಲ ಜನಾದೇಶ–2017 12

'ಲಿಂಗಾಯತ–ವೀರಶೈವ ಕಿತ್ತಾಟ ಚುನಾವಣೆವರೆಗೆ ಅಷ್ಟೇ' 5

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 33,887 | 10,462 | ₹28,786 (ಬೆಂಗಳೂರು) | ₹37,500 (ಬೆಂಗಳೂರು) | 64.04 |

## ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ 'ಸಹ್ಯಾದ್ರಿ' ವಿಜ್ಞಾನ ಮೇಳ

# 'ನೊಬೆಲ್ ಪ್ರಶಸ್ತಿ ಪುರಸ್ಕೃತರ ಮಾರ್ಗದರ್ಶನ'

ಪ್ರಜಾವಾಣಿ ವಾರ್ತೆ



ಮಂಗಳೂರಿನ ಸಹ್ಯಾದ್ರಿ ಕಾಲೇಜಿನಲ್ಲಿ ಮಂಗಳವಾರ ಸಹ್ಯಾದ್ರಿ ವಿಜ್ಞಾನ ಮೇಳದ ಕಿರು ಪುಸ್ತಿಕೆಯನ್ನು ಮಂಜುನಾಥ ಭಂಡಾರಿ ಬಿಡುಗಡೆ ಮಾಡಿದರು.

ಮಂಗಳೂರು: ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಉದ್ಯಮಾಡಳಿತ ಕಾಲೇಜಿನ ವತಿಯಿಂದ ನಾಲ್ಕು ದಿನಗಳ ಸಹ್ಯಾದ್ರಿ ವಿಜ್ಞಾನ ಮೇಳವನ್ನು ಜನವರಿ 6 ರಿಂದ ಕಾಲೇಜಿನ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಂಸ್ಥೆಯ ಅಧ್ಯಕ್ಷ ಮಂಜುನಾಥ ಭಂಡಾರಿ, ವಿದ್ಯಾ ರ್ಥಿಗಳಲ್ಲಿ ವಿಜ್ಞಾನದ ಕುರಿತು ಆಸಕ್ತಿ ಬೆಳೆಸುವ ಉದ್ದೇಶದಿಂದ ಈ ಮೇಳವನ್ನು ಆಯೋಜಿಸಲಾಗಿದೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳು ಸೇರಿದಂತೆ ಹಲವು ವಿಜ್ಞಾನಿಗಳು ಭಾಗವಹಿಸಲಿದ್ದು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ ಎಂದು ಹೇಳಿದರು.

ಸಂಶೋಧನೆ ಎಂಬುದು ಕೇವಲ ಐಐಟಿ, ಎಂಐಟಿಗಳಿಗೆ ಸೀಮಿತ ಎನ್ನುವಂತಾಗಿದೆ. ಇಂತಹ ಪರಿಸ್ಥಿತಿಯನ್ನು ನಿವಾರಿಸಬೇಕಾಗಿದ್ದು, ಕರಾವಳಿ ಕರ್ನಾಟಕದಲ್ಲಿ ವಿದ್ಯಾರ್ಥಿಗಳು ಸಂಶೋಧನಾ ಮನೋಭಾವ ಹೆಚ್ಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ಇಂತಹ ಮೇಳಗಳು ಸಹಕಾರಿ ಆಗಲಿವೆ ಎಂದು ಅಭಿಪ್ರಾಯಪಟ್ಟರು.

ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್, ಎಂಬಿಎ ಸೇರಿದಂತೆ ಸುಮಾರು 1,200 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಒಂದೆಡೆ ಶಾಲಾ ವಿದ್ಯಾರ್ಥಿಗಳಿಗೆ ಮೂಲವಿಜ್ಞಾನ ಕುರಿತು ಮಾಹಿತಿ ಕಾರ್ಯಾಗಾರ ನಡೆದರೆ, ಇನ್ನೊಂದೆಡೆ ಎಂಜಿನಿಯರಿಂಗ್ ಮತ್ತು ಎಂಬಿಎ ವಿದ್ಯಾರ್ಥಿಗಳಿಗೆ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಅಡಾ ಇ. ಯೋನಥ್, ಸರ್ಜ್ ಹ್ಯಾರೋಚ್, ಜೋಸೆಫ್ ಸಿಫಾಕಿಸ್, ರಾಬರ್ಟ್ ರಿಚರ್ಡ್ಸನ್, ಅಮೆರಿಕದ ಬಫೆಲ್ಲೊ ವಿಶ್ವವಿದ್ಯಾಲಯದ ಅಧ್ಯಕ್ಷ ಸತೀಶ್ ಕೆ. ತಿರುಪತಿ, ಫ್ಲೋರಿಡಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಸ್. ಎಸ್. ಅಯ್ಯಂಗಾರ್, ಓಹಿಯೊ ವಿಶ್ವವಿದ್ಯಾಲಯದ ಅನೀಶ್ ಅರೋರಾ, ಕೆನಡಾದ ಮೆಗಿಲ್ ವಿಶ್ವವಿದ್ಯಾಲಯದ ಸತ್ಯಪ್ರಕಾಶ, ಅಮೆರಿಕದ ಎಂಐಟಿಯ ಸಿಇಒ ಅನಂತ ಅಗರವಾಲ್, ಅನುರಾಧಾ ಅಗರವಾಲ್ ಸೇರಿದಂತೆ ಹಲವು ಹಿರಿಯ ವಿಜ್ಞಾನಿಗಳು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಜನವರಿ 6 ರಂದು ಸಂಜೆ 4 ಗಂಟೆಗೆ ತಿರುಪತಿ ತಿರುಮಲ ದೇವಸ್ಥಾನದ ಪ್ರಧಾನ ಅರ್ಚಕ ಡಾ. ರಮಣ ದೀಕ್ಷಿತಲು ಉದ್ಘಾಟಿಸಲಿದ್ದು, ಸಚಿವರಾದ ಎಂ.ಆರ್. ಸೀತಾರಾಮ್, ಬಸವರಾಜ ರಾಯರೆಡ್ಡಿ ಭಾಗವಹಿಸಲಿದ್ದಾರೆ. ಜನವರಿ 7, 8 ಹಾಗೂ 9 ರಂದು ಪರಿಸರ, ನೀರು, ಮಾಲಿನ್ಯ ಸೇರಿದಂತೆ ಒಂದೊಂದು ವಿಷಯ ಕೇಂದ್ರಿತ ಚರ್ಚೆಗಳು ನಡೆಯಲಿವೆ. ಜನವರಿ 10 ರಂದು ಮಧ್ಯಾಹ್ನ 1 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ಇದರ ಜತೆಗೆ ವಿಜ್ಞಾನ ಮಾದರಿಗಳ ಪ್ರದರ್ಶನ, ತಾಂತ್ರಿಕ ಪ್ರದರ್ಶನ, ಗಣಿತ ವಸ್ತು ಪ್ರದರ್ಶನ, ಏರ್ ಷೋ, ಡ್ರೋನ್, ವೇದಿಕ್ ವಿಜ್ಞಾನ ಪ್ರದರ್ಶನಗಳನ್ನು ಆಯೋಜಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ವಿಜ್ಞಾನ ಮೇಳದ ಕಿರು ಪುಸ್ತಿಕೆಯನ್ನು ಮಂಜುನಾಥ ಭಂಡಾರಿ ಬಿಡುಗಡೆ ಮಾಡಿದರು. ಪ್ರಾಂಶುಪಾಲ ಡಾ. ಉಮೇಶ್ ಭೂಷಿ, ಮೇಳದ ಮುಖ್ಯ ಸಂಚಾಲಕ ಡಾ. ಮಂಜುನಾಥ ಸಿ.ಕೆ. ಇದ್ದರು.

**ಮುಖ್ಯಾಂಶಗಳು**

- 1, 200 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ
- ನಾಲ್ಕು ದಿನ ನಡೆಯುವ ಸಮ್ಮೇಳನದಲ್ಲಿ ವಿಜ್ಞಾನ ಗೋಷ್ಠಿ
- ವಿಜ್ಞಾನ ಮಾದರಿ, ತಾಂತ್ರಿಕ ಪ್ರದರ್ಶನ, ಏರ್ ಷೋ ಆಯೋಜನೆ

ಸಮಾಜಮುಖಿ ಸಂಶೋಧನೆಗಳಿಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಅದಕ್ಕಾಗಿ ವಿದ್ಯಾರ್ಥಿಗಳಿಗೆ ಹಿರಿಯ ವಿಜ್ಞಾನಿಗಳು ಮಾಹಿತಿ ನೀಡಲಿದ್ದಾರೆ.

**ಮಂಜುನಾಥ ಭಂಡಾರಿ**
ಸಂಸ್ಥೆಯ ಅಧ್ಯಕ್ಷ

POWERPOINT™ BATTERIES
NOW WITH 48 MONTHS WARRANTY
INVERTERS | SOLAR | UPS AUTOMOTIVE
+91 73530 79999
www.powerpointbatteries.com

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಬುಧವಾರ, ಡಿಸೆಂಬರ್ 20, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು: 12

College of Engineering CENTRAL LIBRARY Mangalore

## ಜ. 6–10: ಸಹ್ಯಾದ್ರಿ ಸಮಾವೇಶ

# ನೊಬೆಲ್ ಪುರಸ್ಕೃತರು, ವಿಜ್ಞಾನಿಗಳ ಜತೆ ಸಂವಾದ



ಡಾ। ಮಂಜುನಾಥ ಭಂಡಾರಿ ಸಮಾವೇಶದ ಬ್ರೋಶರ್ ಬಿಡುಗಡೆಗೊಳಿಸಿದರು.

ಮಂಗಳೂರು, ಡಿ. 19: ನಗರದ ಸಹ್ಯಾದ್ರಿ ಕಾಲೇಜು ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ನೊಬೆಲ್ ಪುರಸ್ಕೃತರು ಹಾಗೂ ಅಂತಾರಾಷ್ಟ್ರೀಯ ವಿಜ್ಞಾನಿಗಳನ್ನು ಒಳಗೊಂಡಂತೆ ವಿಜ್ಞಾನ-ಸಂಶೋಧನಾ ಕ್ಷೇತ್ರದ ಕುರಿತು 'ಸಹ್ಯಾದ್ರಿ ಸಮಾವೇಶ' ಜ. 6ರಿಂದ 10ರ ವರೆಗೆ ಅಡ್ಯಾರ್ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಜರಗಲಿದೆ.

ಸಂಸ್ಥೆಯ ಅಧ್ಯಕ್ಷ ಡಾ। ಮಂಜುನಾಥ್ ಭಂಡಾರಿ ಅವರು ಈ ಕುರಿತು ಮಂಗಳವಾರ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಎಳವೆಯಲ್ಲೇ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಕೊಳ್ಳಬೇಕು ಎಂದು ಸಹ್ಯಾದ್ರಿ ಕಾಲೇಜು ಇದೇ ಮೊದಲ ಬಾರಿಗೆ ಇಂತಹ ಬೃಹತ್ ಸಮಾವೇಶವೊಂದನ್ನು ಆಯೋಜಿಸಿದ್ದು ಸುಮಾರು 1,200 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಸಮಾವೇಶದಲ್ಲಿ ನೊಬೆಲ್ ಪುರಸ್ಕೃತರು, ಅಂತಾರಾಷ್ಟ್ರೀಯ ವಿಜ್ಞಾನಿಗಳು, ಕೈಗಾರಿಕೋದ್ಯಮಿಗಳೊಂದಿಗೆ ಪ್ರೌಢಶಾಲೆ ಹಾಗೂ ಪ.ಪೂ. ವಿದ್ಯಾರ್ಥಿಗಳು, ವಿಜ್ಞಾನ, ತಂತ್ರಜ್ಞಾನ, ವ್ಯವಹಾರ ಆಡಳಿತ ಕ್ಷೇತ್ರಕ್ಕೆ ಸಂಬಂಧಪಟ್ಟ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಸಂವಾದ ನಡೆಸಲಿದ್ದಾರೆ.

ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಕರ್ನಾಟಕ ಜೈವಿಕ ಮತ್ತು ಮಾಹಿತಿ ತಂತ್ರಜ್ಞಾನ ಸೇವೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಸೊಸೈಟಿ, ಬೆಳಗಾವಿ ವಿಶ್ವೇಶರಯ್ಯ ತಾಂತ್ರಿಕ ವಿ.ವಿ., ಮಂಗಳೂರು ವಿ.ವಿ. ಹಾಗೂ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಹಯೋಗದೊಂದಿಗೆ ಸಮಾವೇಶ ನಡೆಯಲಿದೆ ಎಂದರು.

### ನೊಬೆಲ್ ಪುರಸ್ಕೃತರು ಭಾಗಿ

ನೊಬೆಲ್ ಪುರಸ್ಕೃತರಾದ ಅಡಾ ಇ. ಯೊನತ್, ಸರ್ಜ್ ಹೆರ್‍ಯೋಚ್, ಟರ್ನಿಂಗ್ ಅವಾರ್ಡ್ ಇನ್ ಕಂಪ್ಯೂಟರ್ ಸೈನ್ಸ್ ಪುರಸ್ಕೃತ ಜೋಸೆಫ್ ಸಿಫಾಕಿಸ್, ಅಂತಾರಾಷ್ಟ್ರೀಯ ವಿಜ್ಞಾನಿಗಳಾದ ರಾಬರ್ಟ್ ಸಿ. ರಿಚರ್ಡ್‌ಸನ್, ಸತೀಶ್ ಕೆ. ತ್ರಿಪಾಠಿ, ಪ್ರೊ। ಎಸ್.ಎಸ್. ಅಯ್ಯಂಗಾರ್, ಅನಿಶ್ ಅರೋರಾ, ಪ್ರೊ। ಸತ್ಯಪ್ರಕಾಶ್, ಪದ್ಮಶ್ರೀ ಅನಂತ ಅಗರ್ವಾಲ್, ಅನುರಾಧಾ ಅಗರ್ವಾಲ್ ಭಾಗವಹಿಸಲಿದ್ದಾರೆ.

ರಾಜ್ಯಸಭಾ ಸದಸ್ಯ ರಾಜೀವ್ ಗೌಡ, ಡಿ.ಪಿ. ಅಗರ್ವಾಲ್, ಡಾ। ಸುಧೀರ್ ಕೆ. ಮಿಶ್ರಾ, ಎಡಿಜಿಪಿ ಅಮರ್ ಕುಮಾರ್ ಪಾಂಡೆ, ಸಂಜಯ್ ಸಹಾಯ್, ಎಂ.ಎನ್. ವಿದ್ಯಾಶಂಕರ್, ಮನೋಜ್ ರಂಜನ್, ಶಶಿಕಿರಣ್ ಶೆಟ್ಟಿ ಹಸನಬ್ಬ ಅನಂತ್ ರವಿ, ಡಾ। ಬಿ.ಕೆ. ರವೀಂದ್ರ, ಪ್ರಶಾಂತ್ ಪ್ರಕಾಶ್, ಅನಿತಾ ಪೈ, ಭರತ್ ಶಿವಪ್ಪ, ಡಾ। ಬಿ.ಕೆ. ರವೀಂದ್ರ, ಚೇತನ್ ಶೆಣೈ, ಕಮಲೇಶ್ ಮನುಜ, ಸಂದೀಪ್ ಎಸ್.ಪಿ., ರಾಹುಲ್ ಕಿಣಿ ಪಾಲ್ಗೊಳ್ಳಲಿದ್ದಾರೆ ಎಂದರು.

### ಜ. 6: ಉದ್ಘಾಟನೆ

ಸಮಾವೇಶವು ಜ.6 ರಂದು ಮಧ್ಯಾಹ್ನ 4ಕ್ಕೆ ಉದ್ಘಾಟನೆಗೊಳ್ಳಲಿದ್ದು ತಿರುಪತಿ ಕ್ಷೇತ್ರದ ಮುಖ್ಯ ಪುರೋಹಿತ ಡಾ। ರಮಣ ದೀಕ್ಷಿತುಲು, ರಾಜ್ಯ ಸಚಿವರಾದ ಬಸವರಾಜ ರಾಯರೆಡ್ಡಿ, ಎಂ.ಆರ್. ಸೀತಾರಾಮ್ ಭಾಗವಹಿಸಲಿದ್ದಾರೆ. ಜತೆಗೆ ಕೇಂದ್ರ ಸಚಿವ ಡಾ। ಹರ್ಷವರ್ಧನ ಭಾಗವಹಿಸುವ ಕುರಿತು ಮಾತುಕತೆ ನಡೆಯುತ್ತಿದೆ. ಜ.10 ರಂದು ಮಧ್ಯಾಹ್ನ 1 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಸಮಾವೇಶದಲ್ಲಿ ಸಂವಾದದ ಜತೆಗೆ ವಿಜ್ಞಾನ ಮಾದರಿ ತಾಂತ್ರಿಕ, ಗಣಿತ ವಸ್ತು ಪ್ರದರ್ಶನ, ಏರ್ ಶೋ, ಡ್ರೋಣ್‌ಗಳ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.

ಡಾ। ಮಂಜುನಾಥ ಭಂಡಾರಿ ಅವರು ಸಮಾವೇಶದ ಬ್ರೋಶರ್ ಬಿಡುಗಡೆಗೊಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ। ಯು.ಎಂ. ಭೂಷಿ, ಕಾರ್ಯಕ್ರಮ ಸಂಯೋಜಕ ಡಾ। ಸಿ.ಕೆ. ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಬುಧವಾರ, 20 ಡಿಸೆಂಬರ್ 2017 | ಪುಟಗಳು: 16+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 144
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | 



ಪಾಕ್‌ನಲ್ಲಿ ಮುಸ್ಲಿಂ ಧರ್ಮಕ್ಕೆ ಸಿಖ್ಖರ ಬಲವಂತ ಮತಾಂತರ: ಸಚಿವೆ ಸುಷ್ಮಾ ಕಳವಳ P12

ಐಐಎಂಗಳ ಅಧಿಕಾರ ಮತ್ತು ಸ್ವಾಯತ್ತತೆಯನ್ನು ಮತ್ತಷ್ಟು ಹೆಚ್ಚಿಸುವ 'ಐಐಎಂ ವಿಧೇಯಕ-2017' ರಾಜ್ಯಸಭೆಯಲ್ಲಿ ಅನುಮೋದನೆ

ಇಂದು ಭಾರತ-ಶ್ರೀಲಂಕಾ ನಡುವೆ ಕಟಕ್‌ನಲ್ಲಿ ಸರಣಿಯ ಮೊದಲ ಟಿ20 ಹಣಾಹಣಿ P14

# ಜ.6ರಿಂದ ವಿಜ್ಞಾನ- ಸಂಶೋಧನಾ ಸಹ್ಯಾದ್ರಿ ಸಮಾವೇಶ

**ಮಂಗಳೂರು:** ಅಡ್ಯಾರಿನ ಸಹ್ಯಾದ್ರಿ ಕಾಲೇಜು ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ನೋಬೆಲ್ ಪುರಸ್ಕೃತರು ಹಾಗೂ ಅಂತಾರಾಷ್ಟ್ರೀಯ ವಿಜ್ಞಾನಿಗಳನ್ನು ಒಳಗೊಂಡಂತೆ ವಿಜ್ಞಾನ- ಸಂಶೋಧನಾ ಕ್ಷೇತ್ರದ ಕುರಿತು 'ಸಹ್ಯಾದ್ರಿ ಸಮಾವೇಶ' ಜ.6ರಿಂದ 10ರ ವರೆಗೆ ಅಡ್ಯಾರ್ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಜರುಗಲಿದೆ.

ವಿದ್ಯಾರ್ಥಿಗಳು ಎಳವೆಯಲ್ಲೇ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಕೊಳ್ಳಬೇಕು ಎಂದು ಮೊದಲ ಬಾರಿಗೆ ಇಂತಹ ಬೃಹತ್ ಸಮಾವೇಶವೊಂದನ್ನು ಆಯೋಜಿಸಿದ್ದು, ಸುಮಾರು 1200 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಸಮಾವೇಶದಲ್ಲಿ ಪ್ರೌಢಶಾಲಾ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ವಿಜ್ಞಾನ, ತಂತ್ರಜ್ಞಾನ ಹಾಗೂ ವ್ಯವಹಾರ ಆಡಳಿತ ಕ್ಷೇತ್ರಕ್ಕೆ ಸಂಬಂಧಪಟ್ಟ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ನೋಬೆಲ್ ಪುರಸ್ಕೃತರು, ಅಂತಾರಾಷ್ಟ್ರೀಯ ವಿಜ್ಞಾನಿಗಳು ಹಾಗೂ ಕೈಗಾರಿಕೋದ್ಯಮಿಗಳೊಂದಿಗೆ ಸಂವಾದ ನಡೆಸಲಿದ್ದಾರೆ ಎಂದರು. ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಕರ್ನಾಟಕ ಜೈವಿಕ ಮತ್ತು ಮಾಹಿತಿ ತಂತ್ರಜ್ಞಾನ ಸೇವೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಸೊಸೈಟಿ, ಬೆಳಗಾವಿ ವಿಶ್ವೇಶರಯ್ಯ ತಾಂತ್ರಿಕ ವಿವಿ, ಮಂಗಳೂರು ವಿವಿ ಹಾಗೂ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಹಯೋಗದೊಂದಿಗೆ ಸಮಾವೇಶ ನಡೆಯಲಿದೆ ಎಂದು ಅವರು ಹೇಳಿದರು.




ಸಹ್ಯಾದ್ರಿ ಕಾಲೇಜಿನಲ್ಲಿ ನಡೆಯುವ ವಿಜ್ಞಾನ- ಸಂಶೋಧನಾ ಸಹ್ಯಾದ್ರಿ ಸಮಾವೇಶದ ಪುಸ್ತಿಕೆಯನ್ನು ಡಾ.ಮಂಜುನಾಥ್ ಭಂಡಾರಿ ಬಿಡುಗಡೆಗೊಳಿಸಿದರು.

ನೋಬೆಲ್ ಪುರಸ್ಕೃತರಾದ ಅಡಾ ಇ. ಯೊನತ್, ಸರ್ಜ್ ಹೆರ್‌ಬ್ಯೇಚ್, ಟರ್ನಿಂಗ್ ಅವಾರ್ಡ್ ಇನ್ ಕಂಪ್ಯೂಟರ್ ಸೈನ್ಸ್ ಪುರಸ್ಕೃತ ಜೋಸೆಫ್ ಸಿಫಾಕಿಸ್, ಇತರ ಅಂತಾರಾಷ್ಟ್ರೀಯ ವಿಜ್ಞಾನಿಗಳ ರಾಬರ್ಟ್ ಸಿ.ರಿಚರ್ಡ್‌ಸನ್, ಸತೀಶ್ ಕೆ.ತ್ರಿಪಾಠಿ, ಪ್ರೊ.ಎಸ್. ಎಸ್.ಅಯ್ಯಂಗಾರ್, ಅನಿಶ್ ಅರೊರಾ, ಪ್ರೊ.ಸತ್ಯಪ್ರಕಾಶ್, ಪದ್ಮಶ್ರೀ ಅನಂತ ಅಗರ್‌ವಾಲ್, ಅನುರಾಧ ಅಗರ್‌ವಾಲ್ ಭಾಗವಹಿಸಲಿದ್ದಾರೆ. ಭಾರತೀಯ ಪ್ರಮುಖರಾದ ರಾಜ್ಯ ಸಭಾ ಸದಸ್ಯ ರಾಜೀವ್ ಗೌಡ, ಡಿ.ಪಿ.ಅಗರ್‌ವಾಲ್, ಡಾ. ಸುಧೀರ್ ಕೆ.ಮಿಶ್ರಾ, ಎಡಿಜಿಪಿ ಅಮರ್ ಕುಮಾರ್ ಪಾಂಡೆ, ಸಂಜಯ್ ಸಹಾಯ್, ಎಂ.ಎನ್.ವಿದ್ಯಾಶಂಕರ್, ಮನೋಜ್ ರಂಜನ್, ಶಶಿಕಿರಣ್ ಶೆಟ್ಟಿ, ಹಸನಬ್ಬ, ಅನಂತ್ ರವಿ, ಡಾ. ಬಿ.ಕೆ. ರವೀಂದ್ರ, ಪ್ರಶಾಂತ್ ಪ್ರಕಾಶ್, ಅನಿತಾ ಪೈ, ಭರತ್ ಶಿವಪ್ಪ, ಡಾ.ಬಿ.ಕೆ. ರವೀಂದ್ರ, ಚೇತನ್ ಶೆಣೈ, ಕಮಲೇಶ್ ಮನುಜ, ಸಂದೀಪ್ ಎಸ್.ಪಿ., ರಾಹುಲ್ ಕಿಣಿ ಪಾಲ್ಗೊಳ್ಳಲಿದ್ದಾರೆ ಎಂದರು.

**ಜ.6ರಂದು ಉದ್ಘಾಟನೆ:** ಸಮಾವೇಶವು ಜ.6ರಂದು 4ಂಟೆಗೆ ಉದ್ಘಾಟನೆಗೊಳ್ಳಲಿದ್ದು, ತಿರುಪತಿ ಕ್ಷೇತ್ರದ ಮುಖ್ಯ ಪುರೋಹಿತ ಡಾ.ರಮಣ ದೀಕ್ಷಿತುಲು, ರಾಜ್ಯ ಸಚಿವರಾದ ಬಸವರಾಜ ರಾಯರೆಡ್ಡಿ, ಎಂ.ಆರ್.ಸೀತಾರಾಮ್ ಭಾಗವಹಿಸಲಿದ್ದಾರೆ. ಜತೆಗೆ ಕೇಂದ್ರ ಸಚಿವ ಡಾ.ಹರ್ಷವರ್ಧನ ಭಾಗವಹಿಸುವ ಕುರಿತು ಮಾತುಕತೆ ನಡೆಯುತ್ತಿದೆ. ಜ.10ರಂದು ಮಧ್ಯಾಹ್ನ 1ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು. ಸಮಾವೇಶದಲ್ಲಿ ಸಂವಾದದ ಜತೆಗೆ ವಿಜ್ಞಾನ ಮಾದರಿ ತಾಂತ್ರಿಕ, ಗಣಿತ ವಸ್ತು ಪ್ರದರ್ಶನ, ಏರ್ ಶೋ, ಡ್ರೋಣ್‌ಗಳ ಪ್ರದರ್ಶನ ನಡೆಯಲಿದೆ ಎಂದರು. ಕಾಲೇಜಿನ ಪ್ರಿನ್ಸಿಪಾಲ್ ಡಾ.ಯು.ಎಂ.ಭೂಶಿ, ಕಾರ್ಯಕ್ರಮ ಸಂಯೋಜಕ ಡಾ. ಸಿ.ಕೆ. ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು ರಾತ್ರಿ 7.30ಕ್ಕೆ
ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರ ತಿರುಷಷ್ಠಿಯ ಪ್ರಯುಕ್ತ
ರಾಜ್ಯ ಪ್ರಶಸ್ತಿ ಪುರಸ್ಕೃತ ವಿಜೇತ ತೆಲಿಕೆದ ಬೊಳ್ಳಿ
ದೇವದಾಸ್ ಕಾಪಿಕಾಡ್‌ರವರು
ರಚಿಸಿ,ನಟಿಸಿ ನಿರ್ದೇಶಿಸುವ

~ಮುಂಜಾನೆ ಮಾತು~

ಸ್ವರ್ಗ ಸುಖ ಬೇಕು. ಆದರೆ ಸ್ವರ್ಗಸ್ಥರಾಗುವುದು ಯಾರಿಗೂ ಬೇಕಿಲ್ಲ. ನೆರಳು ಬೇಕು ಎಂದು ಆಶಿಸುವ ಮೊದಲು ಗಿಡ ನೆಟ್ಟು ಬೆಳೆಸುವ ಕೆಲಸ ಮಾಡೋಣ.

ವಿಜಯವಾಣಿ

ಕನ್ನಡಿಗರ ಧ್ವನಿ

ನಂ. 1 ಕನ್ನಡ ದಿನಪತ್ರಿಕೆ



ನಿರ್ಮಾ...
ಸ್ಯಾಂಡಲ್‌ವುಡ್
ರಚಿತಾ ರಾಮ್
ನಿರ್ಮಾಣಕ್ಕೆ
ಮಾಂಡ್ರೆ
ಮುಂದಿನ
ಕಾ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI ● MANGALURU | ಮಂಗಳೂರು ● ಸಂಪುಟ 6 ● ಸಂಚಿಕೆ 261

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 | 20 ಡಿಸೆಂಬರ್ 2017 | ಬುಧವಾರ | 20 DECEM

# ಸಹ್ಯಾದ್ರಿ ಸಮ್ಮೇಳನ ಮಾಹಿತಿ ಕೈಪಿಡಿ ಬಿಡುಗಡೆ

## ಜ.6ರಿಂದ 10ರವರೆಗೆ ವಿಜ್ಞಾನ ವಿಷಯದಲ್ಲಿ ಸಮ್ಮೇಳನ | 1200 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಅಡ್ಯಾರಿನ ಸಹ್ಯಾದ್ರಿ ಕಾಲೇಜು ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಜ.6ರಿಂದ 10ರವರೆಗೆ ವಿಜ್ಞಾನ ವಿಷಯದಲ್ಲಿ 'ಸಹ್ಯಾದ್ರಿ ಸಮ್ಮೇಳನ' ನಡೆಯಲಿದ್ದು, ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಮಂಗಳವಾರ ಮಾಹಿತಿ ಕೈಪಿಡಿ ಬಿಡುಗಡೆಗೊಳಿಸಿದರು.

ವಿದ್ಯಾರ್ಥಿಗಳಿಗೆ ನೊಬೆಲ್ ಪುರಸ್ಕೃತರು, ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ಹಾಗೂ ಕೈಗಾರಿಕೋದ್ಯಮಿಗಳನ್ನು ಭೇಟಿಯಾ ಗುವ ಹಾಗೂ ಅವರ ಜತೆ ಸಂವಾದ ನಡೆಸಲು ಸಮ್ಮೇಳನದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ವಿಜ್ಞಾನ, ತಂತ್ರಜ್ಞಾನ, ವ್ಯವಹಾರಡಳಿತ ವಿಷಯಗಳ ಕಡೆಗೆ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸಿ, ಸಂಶೋಧನೆಯ ಕಡೆಗೆ ಪ್ರೇರೇಪಣೆಗೊಳಿಸುವುದು ಈ ಸಮ್ಮೇಳನದ ಪ್ರಮುಖ ಉದ್ದೇಶವಾಗಿದೆ. ದಕ್ಷಿಣ ಕನ್ನಡ ಮಾತ್ರವಲ್ಲದೆ ನೆರೆಯ ಜಿಲ್ಲೆಗಳ ಪ್ರೌಢಶಾಲೆ, ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಸಮ್ಮೇಳನದಲ್ಲಿ ಭಾಗ ವಹಿಸುವ ನಿರೀಕ್ಷೆ ಇದೆ.




ಸಹ್ಯಾದ್ರಿ ಸಮ್ಮೇಳನದ ಮಾಹಿತಿ ಕೈಪಿಡಿಯನ್ನು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಬಿಡುಗಡೆ ಗೊಳಿಸಿದರು. ಪ್ರಾಂಶುಪಾಲ ಡಾ. ಉಮೇಶ್ ಭೂಷಿ, ಡಾ.ಸಿ.ಕೆ.ಮಂಜುನಾಥ್ ಉಪಸ್ಥಿತರಿದ್ದರು.

6ರಂದು ಮಧ್ಯಾಹ್ನ 2 ಗಂಟೆಗೆ ಉದ್ಘಾಟನೆ ನಡೆಯಲಿದೆ. ತಿರುಪತಿ ತಿರುಮಲ ದೇವಾಲಯದ ಮುಖ್ಯ ಪುರೋಹಿತ ಡಾ.ರಾಮನ ದೀಕ್ಷಿತುಲು, ನೊಬೆಲ್ ಪುರಸ್ಕೃತರು, ವಿಜ್ಞಾನಿಗಳು, ತಾಂತ್ರಿಕ ಪರಿಣಿತರು ಹಾಗೂ ಉದ್ಯಮಿಗಳ ಜತೆ ಚರ್ಚಾಗೋಷ್ಠಿ ನಡೆಸಿಕೊಡುವರು. ಹೆಸರಾಂತ ಉಪನ್ಯಾಸಕರು ಹಾಗೂ ತಾಂತ್ರಿಕ ನೈಪುಣ್ಯರ ತಾಂತ್ರಿಕ ಚರ್ಚೆ. ಬೆಳಗ್ಗೆ 8.30ರಿಂದ ವಿಜ್ಞಾನ ಮಾದರಿ ವಸ್ತು ಪ್ರದರ್ಶನ, ತಾಂತ್ರಿಕ ವಸ್ತುಪ್ರದರ್ಶನ, ಗಣಿತ ವಸ್ತು ಪ್ರದರ್ಶನ, ಏರ್ ಶೋ, ಡ್ರೋಣ್‌ಗಳ ಪ್ರದರ್ಶನ ನಡೆಯಲಿದೆ. 10ರಂದು ಮಧ್ಯಾಹ್ನ 1ಕ್ಕೆ ಸಮಾರೋಪ ನಡೆಯಲಿದೆ ಎಂದು ಮಂಜುನಾಥ ಭಂಡಾರಿ ವಿವರಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಕರ್ನಾಟಕ ಜೈವಿಕ ಮತ್ತು ಮಾಹಿತಿ ತಂತ್ರಜ್ಞಾನ ಸೇವೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಸೊಸೈಟಿ, ಬೆಳಗಾವಿ ವಿಟಿಯು, ಮಂಗಳೂರು ವಿವಿ ಹಾಗೂ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಹಯೋಗದೊಂದಿಗೆ ಸಮಾವೇಶ ನಡೆಯಲಿದೆ ಎಂದರು.

ಡಾ.ಉಮೇಶ್ ಭೂಷಿ, ಡಾ.ಸಿ.ಕೆ.ಮಂಜುನಾಥ್ ಇದ್ದರು.

### ನೋಬೆಲ್ ಪುರಸ್ಕೃತರು ಭಾಗಿ

ನೋಬೆಲ್ ಪುರಸ್ಕೃತರಾದ ಅಡಾ ಇ.ಯೊನತ್, ಸರ್ಜ್ ಹೆರ್‍ಯೋಚ್, ಟರ್ನಿಂಗ್ ಅವಾರ್ಡ್ ಇನ್ ಕಂಪ್ಯೂಟರ್ ಸೈನ್ಸ್ ಪುರಸ್ಕೃತ ಜೋಸೆಫ್ ಸಿಫಾಕಿಸ್, ಇತರ ಅಂತಾರಾಷ್ಟ್ರೀಯ ವಿಜ್ಞಾನಿಗಳ ರಾಬರ್ಟ್ ಸಿ.ರಿಚರ್ಡ್‌ಸನ್, ಸತೀಶ್ ಕೆ.ತ್ರಿಪಾಟಿ, ಪ್ರೊ.ಎಸ್.ಎಸ್. ಅಯ್ಯಂಗಾರ್, ಅನಿಶ್ ಅರೋರಾ, ಪ್ರೊ. ಸತ್ಯಪ್ರಕಾಶ್, ಪದ್ಮಶ್ರೀ ಅನಂತ ಅಗರ್‌ವಾಲ್, ಅನುರಾಧ ಅಗರ್‌ವಾಲ್ ಭಾಗವಹಿಸಲಿದ್ದಾರೆ. ಅಲ್ಲದೆ ರಾಜ್ಯಸಭಾ ಸದಸ್ಯ ರಾಜೀವ್ ಗೌಡ, ಪ್ರಮುಖರಾದ ಡಿ.ಪಿ.ಅಗರ್ವಾಲ್, ಡಾ. ಸುಧೀರ್ ಕೆ.ಮಿಶ್ರಾ, ಎಡಿಜಿಪಿ ಅಮರ್ ಕುಮಾರ್ ಪಾಂಡೆ, ಸಂಜಯ್ ಸಹಾಯ್, ಎಂ.ಎನ್.ವಿದ್ಯಾಶಂಕರ್, ಮನೋಜ್ ರಂಜನ್, ಶಶಿಕಿರಣ್ ಶೆಟ್ಟಿ, ಹಸನಬ್ಬ, ಅನಂತ್ ರವಿ, ಡಾ.ಬಿ.ಕೆ.ರವೀಂದ್ರ, ಪ್ರಶಾಂತ್ ಪ್ರಕಾಶ್, ಅನಿತಾ ಪೈ, ಭರತ್ ಶಿವಪ್ಪ, ಚೇತನ್ ಶೆಣೈ, ಕಮಲೇಶ್ ಮನುಜ, ಸಂದೀಪ್ ಎಸ್.ಪಿ, ರಾಹುಲ್ ಕಿಣಿ ಪಾಲ್ಗೊಳ್ಳಲಿದ್ದಾರೆ ಎಂದು ಡಾ.ಭಂಡಾರಿ ಹೇಳಿದರು.